# ವಿಶ್ವದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ

15-11-2025 | ಶನಿವಾರ | ಸಂಪುಟ-3 | ಸಂಚಿಕೆ-5 | ಪುಟಗಳು-1


## ನುಡಿಮುತ್ತು

"ಒಬ್ಬನು ತನ್ನೊಳಗಿನ ಶಕ್ತಿಯನ್ನು ಅರಿತಾಗ ಚಮತ್ಕಾರಗಳು ಸಂಭವಿಸುತ್ತವೆ"

– ಸ್ವಾಮಿ ವಿವೇಕಾನಂದ

# ಭಾವನೆಗಳ ಬೆಳಕು ವಿಶ್ವದರ್ಶನ ಸಂಭ್ರಮ

## ಸಂಸ್ಕಾರದಿಂದ ಚಿಂತನಾತ್ಮತೆ ಕಡೆಗೆ ವಿಶ್ವದರ್ಶನ ಸಂಭ್ರಮ

ಸಂಸ್ಕಾರ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟ ಒಬ್ಬ ಹಿರಿಯ ಚಿಂತಕರನ್ನು ಆಮಂತ್ರಿಸಿ ಅವರಿಂದ ಚಿಂತನಾತ್ಮಕವಾದ ನುಡಿಗಳನ್ನು ಆಡಿಸುವುದಕ್ಕಾಗಿ ಆದರ್ಶ ಗೋಕುಲೆಯವರ ಪ್ರಧಾನ ಭಾಷಣ ಏರ್ಪಡಿಸಲಾಗಿದೆ. ಇದು ಕೂಡ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಲಿದೆ. ಹಿರಿಯ ಪ್ರಭುದ್ಧ ಕಲಾವಿದ-ರಿಂದ ಚಕ್ರಗ್ರಹಣ, ಯಕ್ಷಗಾನ ಪ್ರಸಂಗ.

ಈ ನಾಡಿನ ಅತ್ಯಂತ ಶ್ರೇಷ್ಠವಾದ ಕಲೆಗಳಲ್ಲೊಂದಾದ ಯಕ್ಷಗಾನ, ತಾಳಮದ್ದಳೆ ಪ್ರಸಂಗವನ್ನು ಆಯೋಜಿಸಲಾಗಿದ್ದು, ನಾಡಿನ ಹಿರಿಯ ಕಲಾವಿದರು ಒಟ್ಟಾಗಿ ಚಕ್ರಗ್ರಹಣ ಎಂಬ ಪ್ರಸಂಗವನ್ನು ಪ್ರಸ್ತುತಪಡಿಸುತ್ತಿದ್ದಾರೆ. ಇದು ಕವಿ ದೇವಿದಾಸರಿಂದ ರಚಿತವಾದ ಪಠ್ಯ, ಈ ಪಠ್ಯ ಸದ್ಯ 9ನೇ ತರಗತಿಯ ಕನ್ನಡ ಪುಸ್ತಕ ಪಠ್ಯಪುಸ್ತಕದಲ್ಲಿ ದಾಖಲಾಗಿದ್ದು, ಇದನ್ನು ಪ್ರದರ್ಶನಕ್ಕೆ ಅಳವಡಿಸಿದರೆ ಹೇಗಿರುತ್ತದೆ? ಎಂಬ ಕುತೂಹಲವಿದೆ. ಈಗಾಗಲೇ ಇದನ್ನು ಅನೇಕರು ಪ್ರಯೋಗ ಮಾಡಿ ನೋಡಿದ್ದಾರೆ, ಆದರೆ ಪ್ರಬುದ್ಧರಿಂದ ಏರ್ಪಡಿಸಿದರೆ ಅದರ ಪರಿಣಾಮ ಏನಾಗಬಹುದು? ಎಂಬುದನ್ನು ವೀಕ್ಷಿಸುವುದಕ್ಕೆ ಸದಾವಕಾಶವಿದೆ. ವಿದ್ಯಾವಾಚಸ್ಪತಿ, ಉಮಾ ಕಾಂತ್ ಭಟ್, ಎಂ. ಎನ್ ಹೆಗಡೆ, ಡಾ. ಮಹೇಶ್ ಭಟ್ ಮುಮ್ಮೇಳದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅನಂತ ಹೆಗಡೆ ದಂತಳಿಗೆ, ನರಸಿಂಹ ಹಂಡ್ರ್ಮನೆ, ಪ್ರಮೋದ್ ಕಬ್ಬಿನಗದ್ದೆ ಹಿಮ್ಮೇಳದಲ್ಲಿ ಸಾತ್ ನೀಡಲಿದ್ದಾರೆ. ಆ ಮೂಲಕ ಒಂದು ಸಮರ್ಥ-ವಾದ ತಾಳಮದ್ದಳೆಯನ್ನು ವೀಕ್ಷಿಸುವ ಸೌಭಾಗ್ಯವನ್ನು ವೇದಿಕೆ ಕಲ್ಪಿಸಿದೆ.

## ವಿಶ್ವದರ್ಶನದ ಯಶೋಗಾಥೆ

ಸ್ಥಳೀಯ ವಿದ್ಯಾರ್ಥಿಗಳಿಗೆ ಅನುಕೂಲ ಮತ್ತು ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ 1992ರಲ್ಲಿ ವಿಶ್ವದರ್ಶನವು ಅಂದಿನ ಶಾಸಕರಾದ ಉಮೇಶ ಭಟ್ಟರ ಮೂಲಕ ಇಡಗುಂದಿಯಲ್ಲಿ ಪ್ರೌಢಶಾಲೆ ಆರಂಭವಾಯಿತು. ಶಾಲೆ ಪ್ರಾರಂಭಕ್ಕೆ ಸ್ವಂತ ಜಾಗ ಇಲ್ಲದಿರುವಾಗ ಇಡಗುಂದಿ ಸೇವಾ ಸಹಕಾರಿ ಸಂಘವು ಸ್ಥಳಾವಕಾಶ ಮಾಡಿ ಕೊಟ್ಟಿತು. ಬಾಲಕಿಯರಿಗೆ ಉತ್ತಮ ಶಿಕ್ಷಣ ನೀಡುವುದು ಅಂದಿನ ಆದ್ಯತೆಗಳಲ್ಲೊಂದು. ಬಾಲಕಿ-ಯರಿಗಾಗಿಯೇ ಯಲ್ಲಾಪುರದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭ ಮಾಡುವಾಗಲೂ ಟಿ.ಎಸ್.ಎಸ್. ಕಟ್ಟಡದಲ್ಲಿ ಪ್ರಾರಂಭಮಾಡಿದ್ದು ಶಿಕ್ಷಣ ನೀಡಲು ಇರುವ ತುಡಿತಕ್ಕೆ ಸಾಕ್ಷಿಯಾಗಿದೆ. ಮುಂದೆ ಇದೇ ಪ್ರೌಢಶಾಲೆ ಬಾಲಕರಿಗೂ ಮುಕ್ತವಾಯಿತು. ಈಗ ಇಡಗುಂದಿ ಮತ್ತು ಯಲ್ಲಾಪುರದ ಪ್ರೌಢಶಾಲೆಗಳು ಸ್ವಂತ ಜಾಗದಲ್ಲಿ ನಡೆಯುತ್ತಿದ್ದು ಸರಕಾರದ ಅನುದಾನಕ್ಕೆ ಒಳಪಟ್ಟು ಬಿಸಿಯೂಟ ಮೊದಲಾದ ಯೋಜನೆಗಳನ್ನು ಪಡೆದು ಕೊಂಡಿತು.

1998 ರಲ್ಲಿ ಆಂಗ್ಲ ಮಾಧ್ಯಮ ಆರಂಭವಾಗಿ, 2022 ರಲ್ಲಿ ಯಲ್ಲಾಪುರ ತಾಲೂಕಿನಲ್ಲಿ ಪ್ರಪ್ರಥಮವಾಗಿ ಸಿ.ಬಿ.ಎಸ್.ಸಿ ಮಾದರಿಯನ್ನು ಪರಿಚಯಿಸಿತು.

ಅಂಕೋಲದಲ್ಲಿ ನರ್ಸಿಂಗ್ ಕಾಲೇಜು ಪ್ರಾರಂಭ ಮಾಡುವುದರ ಮೂಲಕ ಅದೆಷ್ಟೋ ಗ್ರಾಮೀಣ ಯುವಜನರ ಕನಸುಗಳಿಗೆ ಮಣಿ ಹಾಕಿದೆ.

2017 ರಲ್ಲಿ ಶಿಕ್ಷಕರ ತರಬೇತಿ ಸಂಸ್ಥೆ ಪ್ರಾರಂಭವಾಯಿತು. 2021 ರಲ್ಲಿ ಪದವಿಪೂರ್ವ ಕಾಲೇಜು ಹಾಗೂ 2023 ಪತ್ರಿಕೋದ್ಯಮ ಸಮೂಹ ಸಂವಹನದಲ್ಲಿ ಪಿ.ಜಿ ಡಿಪ್ಲೊಮಾ ಕೋರ್ಸ್ ಆರಂಭವಾಗಿ ನಾಡಿನ ಪತ್ರಿಕಾ ರಂಗದಲ್ಲಿ ಅದ್ಭುತ ಪತ್ರಕರ್ತರನ್ನು ನೀಡಿದೆ. ಜೊತೆಗೆ ಮಕ್ಕಳಿಗೆ ಕರಾಟೆ,ಸ್ಕೇಟಿಂಗ್, ಸ್ಕೌಟ್ ಎಂಡ್ ಗೈಡ್ಸ್, ಚೆಸ್ ತರಬೇತಿ ನೀಡುತ್ತಿದೆ. ಅಲ್ಲಿಂದ ಇಲ್ಲಿಯವರೆಗೆ 5,155 ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದು ಪ್ರಸ್ತುತ 1,858 ವಿದ್ಯಾರ್ಥಗಳು ವ್ಯಾಸಂಗ ಮಾಡುತ್ತಿರುವರು.



## ಸಂಸ್ಕಾರಯುತ ಶಿಕ್ಷಣ-ಕ್ಕೆ ಪೂರಕವಾದ "ವಿಶ್ವದರ್ಶನ ಪುರಸ್ಕಾರ"

ಶೈಕ್ಷಣಿಕ ಅವರಣದಲ್ಲಿ ತನ್ನ ಚಟುವಟಿಕೆಗಳನ್ನಷ್ಟೆ ಮಾಡುವ ಕಾಲವೊಂದಿತ್ತು, ಆದರೆ ಶೈಕ್ಷಣಿಕ ಪರದಿಯನ್ನು ಮೀರಿ ಮಕ್ಕಳನ್ನು ಸಮಾಜಮುಖಿಯಾಗಿ ತೊಡಗಿಸಬೇಕು, ಸಂಸ್ಕಾರವನ್ನು ಅಳವಡಿಸಿಕೊಳ್ಳಬೇಕು, ಜ್ಞಾನಿಗಳನ್ನು ಪುರಸ್ಕ-ರಿಸಬೇಕು ಎಂಬ ಹಂಬಲ ನಮ್ಮ ಸಂಸ್ಥೆಯಲ್ಲಿ ವಿಶಿಷ್ಟವಾಗಿದೆ. ಸಂಸ್ಕಾರ ಸಹಿತವಾದ ಶಿಕ್ಷಣ ನಮ್ಮ ಧ್ಯೇಯ ಈ ಧ್ಯೇಯವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಸುಸಂಸ್ಕೃತರನ್ನು, ಸಂಸ್ಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ನಮ್ಮ ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ ಪರಿಚಯಿಸಬೇಕು, ಅವರನ್ನು ಸಂಸ್ಥೆಯ ಆವರಣದಲ್ಲಿ ಗೌರವಿಸಬೇಕು ಆ ಮೂಲಕ ವಿದ್ಯಾರ್ಥಿಗಳಿಗೆ ಒಂದು ಪ್ರೇರಣೆಯಾಗಬೇಕು ಎಂಬುದು ನಮ್ಮ ಸಂಸ್ಥೆಯ ಸಂಕಲ್ಪವಾಗಿದೆ. ಇದಕ್ಕಾಗಿಯೇ ಈ ವರ್ಷ ಅಂತರಾಷ್ಟ್ರೀಯ ಯೋಗ ಗುರುಗಳಾದ, ರಾಜ್ಯ ಪತಂಜಲಿ ಯೋಗ ಪೀಠದ ರಾಜ್ಯ ಪ್ರಭಾರಿ, ಯೋಗಪೀಠದ ಹಿರಿಯರಾದ ಭವರ ಲಾಲ್ ಆರ್ಯರನ್ನು ವಿಶ್ವದರ್ಶನ ಪುರಸ್ಕಾರಕ್ಕೆ ಆಮಂತ್ರಿಸಿ, ಅವರನ್ನು ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಇದೊಂದು ವಿಶಿಷ್ಟವಾದ, ಅಭೂತಪೂರ್ವವಾದ ಸನ್ನಿವೇಶವಾಗಿದ್ದು ಯಲ್ಲಾಪುರದ ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ದಾಖಲೆಯಾಗುವ ಸಾಧ್ಯತೆ ಇದೆ.

## ಭವಿಷ್ಯೋನ್ನತಿ ಯೋಜನೆಗಳು.

ಮುಂಬರುವ ಶೈಕ್ಷಣಿಕ ವರ್ಷದಿಂದ ಬಿಎ ಮತ್ತು ಬಿಎಸ್ಸಿ ಪದವಿಗಳನ್ನು ಸಂಸ್ಥೆ ಪ್ರಾರಂಭ ಮಾಡಲಿದೆ, ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ವಸತಿ ಶಾಲೆ ನಿರ್ಮಾಣದ ಯೋಜನೆ ಮಾಡಲಾಗಿದ್ದು ಕಾರ್ಯ ರೂಪಕ್ಕೆ ಬರಲಿದೆ. ರಾಜ್ಯದಲ್ಲೇ ವಿನೂತನ ಮಾದರಿಯ ಶಿಕ್ಷಣದ ಪರಿಕಲ್ಪನೆ ಇದಾಗಿದ್ದು ಸ್ಪರ್ಧಾತ್ಮಕಪರೀಕ್ಷೆಗಳಿಗೆ ಸಹಾಯಕವಾಗಲಿದೆ. ರಾಜ್ಯದೆಲ್ಲೆಡೆಯಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಲಿದೆ.

ಐಎಎಸ್, ಐಪಿಎಸ್, ಕೆಎಎಸ್, ಐಆರ್‌ಬಿ, ಬ್ಯಾಂಕಿಂಗ್ ಸೇ-ರಿದಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡುವ ಉದ್ದೇಶವಿದೆ. ಪದವಿಪೂರ್ವ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಮಾಡುವ ಗುರಿಯಿದೆ. ಸ್ಥಳೀಯವಾಗಿ ತಲೆದೋರುತ್ತಿರುವ ದೊಡ್ಡ ಸಮಸ್ಯೆ ಗ್ರಾಮೀಣ ಭಾಗದಲ್ಲಿ ಕಡಿಮೆಯಾಗುತ್ತಿರುವ ಯುವಜನರ ಸಂಖ್ಯೆ. ಅದಕ್ಕೆ ಪರಿಹಾರವಾಗಿ ಬೇರೆಬೇರೆ ಕಡೆಗಳಲ್ಲಿ ಉದ್ಯೋಗದಲ್ಲಿ ಇರುವರಿಗೆ ಸ್ಥಳೀಯವಾಗಿ ಕೆಲಸ ಮಾಡಲು ಅನುಕೂಲವಾಗುವಂತೆ ವರ್ಕ್ ಸ್ಟೇಶನ್ ಸ್ಥಾಪಿಸಿ ಯುವಜನತೆಯನ್ನು ಸೆಳೆಯುವ ಯೋಜನೆ ವಿಶೇಷವಾಗಿದೆ.

## ಪ್ರತಿಭೆಗಳನ್ನು ಗುರುತಿಸಿ, ಪೋಷಿಸಿ, ಪ್ರೋತ್ಸಾಹಿಸುವ ಉತ್ಸವ

ನಾಡಿನಾದ್ಯಂತ, ಅದರಲ್ಲೂ ನಮ್ಮ ಭಾಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಯ ಮೂಲಕ ವ್ಯಕ್ತಿ ಸಮಷ್ಟಿ ಬೆಳಗಿದ ವ್ಯಕ್ತಿಗಳನ್ನ ಗುರುತಿಸಿ ಅವರಿಗೆ ಗೌರವ ಸಮರ್ಪಣೆಯಾಗಿ"ವಿಶ್ವ ದರ್ಶನ ಗೌರವ" ಪ್ರಶಸ್ತಿ ಪ್ರಧಾನ ಕಾರ್ಯಕ್ರಮವಿದ್ದು, ಈ ಮೂಲಕ ಎಲ್ಲಾ ಹಿರಿಯರ ಸಾಧನೆಗಳನ್ನು ಆ ದಿನ ನಮ್ಮ ವಿದ್ಯಾರ್ಥಿ ಬಳಗಕ್ಕೆ ಪರಿಚಯಿಸುವ ಹಾಗೂ ಗೌರವಿಸುವ ಕಾರ್ಯ ನಡೆಯಲಿದೆ. ಇದರ ಜೊತೆಗೆ ಸಂಸ್ಥೆಯಲ್ಲಿ ನಡೆಯುತ್ತಿರುವ ಎಲ್ಲಾ ವಿಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಿ , ಜೊತೆಗೆ ನಿರಂತರವಾಗಿ ಪೂರ್ವ ಪ್ರಾಥಮಿಕದಿಂದ ತೊಡಗಿ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ವೈವಿಧ್ಯಮಯವಾದ ಸಾಂಸ್ಕೃತಿಕ ಪ್ರದರ್ಶನಗಳು ರಂಗಭೂಮಿಯನ್ನು ಸುಂದರಗೊಳಿಸಲಿಕ್ಕಿದೆ. ಈ ಸಂದರ್ಭದಲ್ಲಿ ಸಕಲರು ಕಾರ್ಯಕ್ರಮಕ್ಕೆ ಆಗಮಿಸಿ ಇದನ್ನು ಸಾರ್ಥಕ ಗೊಳಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

## ಪೌರಾಣಿಕ ನಾಟಕಗಳ ಕಲಾಹಂದರ ಈ ಸಂಭ್ರಮ

ಇಂದಿನ ಡಿಜಿಟಲ್ ಯುಗದಲ್ಲಿ ನಮ್ಮ ಹಿರಿಯರು ಪೋಷಿಸುತ್ತಾ ಬಂದಿದ್ದ ಪೌರಾಣಿಕ ನಾಟಕಗಳ ಪ್ರದರ್ಶನ ದಿನೇ ದಿನೇ ಕಳೆಗುಂದುತ್ತಿದೆ, ಇದರ ಕುರಿತು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಲಿ ಎನ್ನುವ ಉದ್ದೇಶದಿಂದ ಶಿವನಾದ ಕಲಾಸೌರಭ ನಾಟಕ ತಂಡದಿಂದ ಭಕ್ತ ಪ್ರಹ್ಲಾದ ನಾಟಕ ಪ್ರದರ್ಶನ ನಡೆಯಲಿದೆ.

## ನಾಡಿನ ಖ್ಯಾತ ಹಿರಿಯ ಕಲಾವಿದರಿಂದ ಸಂಗೀತ ರಸದೌತಣ

ಗಾಯನ ಸಂಸ್ಕಾರ ಎನ್ನುವುದು ನಮ್ಮ ಆವರಣದಲ್ಲಿ ಸದಾ ಕಾಲ ಝೇಂಗುಡುತ್ತಿರುವ ಒಂದು ಸಂಸ್ಕಾರವಾಗಿದೆ. ಆ ಸಂಸ್ಕಾರವನ್ನು ಶಂಕರ ಶಾನಭಾಗ ತಂಡದವರು ನಡೆಸಿಕೊಡಲಿದ್ದಾರೆ. ಹಾಗೂ "ಕಾವ್ಯ ಸಂಗೀತ" ಕಾರ್ಯಕ್ರಮದ ಮುಖಾಂತರ ಕನ್ನಡ ಸಾಹಿತ್ಯ ಕಾವ್ಯ ಪರಂಪರೆ ಬೆಳೆದು ಬಂದ ಬಗೆಯ ವಿವಿಧ ಹಂತದ ನೋಟವನ್ನು ವಿಶ್ವದರ್ಶನ ಸಂಭ್ರಮ ಕಾರ್ಯಕ್ರಮ ನಮಗೆ ಪರಿಚಯ ಮಾಡಿಸಲಿದೆ. ಅತ್ಯಂತ ಹಿರಿಯ ಹಾಗೂ ಅನುಭವಿ ಸಂಗೀತಗಾರರಿಂದ ಈ ಕಾರ್ಯಕ್ರಮ ನಡೆಯಲಿದ್ದು ವಿಶ್ವದರ್ಶನ ಸಂಭ್ರಮಕ್ಕೆ ಇನ್ನಷ್ಟು ಮೆರಗನ್ನು ನೀಡಲಿದೆ. ಈ ಕಾರ್ಯಕ್ರಮಕ್ಕೆ ತಾವೆಲ್ಲಾ ಸಕುಟುಂಬದೊಂದಿಗೆ ಆಗಮಿಸಿ ಚಂದಗಾಣಿಸಿಕೋಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತೇವೆ.

# ನವೆಂಬರ್ 28 ಮತ್ತು 29ರ ಸಂಭ್ರಮಕ್ಕೆ ಸಜ್ಜಾಗುತ್ತಿರುವ ವಿಶ್ವದರ್ಶನ ಶಿಕ್ಷಣ ಸಮೂಹ

ಯಲ್ಲಾಪುರ: ವಿಶ್ವದರ್ಶನ ಸಮೂಹ ಸಂಸ್ಥೆಗಳ ಈ ಸಾಲಿನ ವಾರ್ಷಿಕೋತ್ಸವ ವಿಶ್ವದರ್ಶನ ಸಂಭ್ರಮವನ್ನು ಪ್ರದರ್ಶನ ಸಂಭ್ರಮ, ಇದು ನಮ್ಮೂರ ಹಬ್ಬ ಎಂಬ ಥೀಂ ಅಡಿಯಲ್ಲಿ ಆಚರಿಸಲು ಯೋಜನೆಯ ರೂಪಿಸಲಾಗಿದೆ. ಇದುವರೆಗೂ ಒಂದು ದಿನ ಮಾತ್ರ ನಡೆಯುತ್ತಿದ್ದ ವಿಶ್ವದರ್ಶನ ಸಂಭ್ರಮ, ಇದೇ ಬರುವ ನವೆಂಬರ್ 28 ಮತ್ತು 29ರಂದು ಎರಡು ದಿನಗಳ ಕಾಲ ನಡೆಯಲಿದೆ ಎಂದು ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ್ ಕೋಣೆಮನೆ ಹೇಳಿದರು.

ಅವರು ವಿಶ್ವದರ್ಶನ ಶಿಕ್ಷಣ ಸಮೂಹದ ಗಂಗಾಧರೇಂದ್ರ ಸರಸ್ವತಿ ಸಭಾಭವನದಲ್ಲಿ ನಡೆದ ವಿಶ್ವದರ್ಶನ ಸಂಭ್ರಮ ಕಾರ್ಯಕ್ರಮದ ಪೂರ್ವಭಾವಿ ಪತ್ರಿಕಾಗಷ್ಠಿಯಲ್ಲಿ ಮಾತನಾಡಿದರು.

ವಿಶ್ವದರ್ಶನಶಿಕ್ಷಣ ಸಮೂಹದ ನೂರಾರು ಪ್ರತಿಭಾವಂತ ವಿದ್ಯಾರ್ಥಿ- ವಿದ್ಯಾರ್ಥಿನಿಯರ ಜೊತೆಗೆ ತಾಲೂಕಿನ ಹಾಗೂ ರಾಜ್ಯಮಟ್ಟದ ವಿವಿಧ ಕಲಾವಿದರಿಂದ ನೃತ್ಯ ಸಂಗೀತ ಯಕ್ಷಗಾನ ತಾಳಮದ್ದಳೆ ಸೇರಿದಂತೆ ವಿವಿಧ ರೀತಿಯ ಸಾಂಸ್ಕೃತಿಕ ಮತ್ತು ಮನರಂಜನೆ ಕಾರ್ಯಕ್ರಮಗಳು ನಡೆಯಲಿವೆ.

ಎರಡು ದಿನಗಳ ಸಾಂಸ್ಕೃತಿಕ ಹಬ್ಬಕ್ಕೆ ನವೆಂಬರ್ 28ರ ಮುಂಜಾನೆ 10.30 ಗಂಟೆಗೆ ಯಲ್ಲಾಪುರ ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಶಿವರಾಮ ಹೆಬ್ಬಾರ್ ಅವರು ಚಾಲನೆ ನೀಡಲಿದ್ದಾರೆ. ವಿಶ್ವದರ್ಶನ ಸಂಭ್ರಮದಲ್ಲಿ ಕೌಶಲ್ಯ, ಕಲೆ, ವಿಜ್ಞಾನ, ಆರೋಗ್ಯ, ಶಿಕ್ಷಣ, ತಂತ್ರಜ್ಞಾನ ಮತ್ತು ಆಹಾರ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಈ ಬಾರಿ ಅವಕಾಶ ಕಲ್ಪಿಸಿರುವುದು ವಿಶೇಷ ಆಕರ್ಷಣೆಯಾವಾಗಲಿದೆ. ಮಧ್ಯಾಹ್ನ 3 ಗಂಟೆಯಿಂದ ನಾಡಿನ ಖ್ಯಾತ ಕಲಾವಿದರಿಂದ ಚಕ್ರಗ್ರಹಣ ತಾಳಮದ್ದಳೆ ನಡೆಯಲಿದ್ದು, ಹಿಮ್ಮೇಳದಲ್ಲಿ ಭಾಗವತರಾಗಿ ಅನಂತ ದಂತಳಿಗೆ, ಮದ್ದಳಿಯಲ್ಲಿ ನರಸಿಂಹ ಹಂಡ್ರ್ಮನೆ, ಚಂಡೆಯಲ್ಲಿ ಶ್ರೀ ಪ್ರಮೋದ ಕಬ್ಬಿನಗದ್ದೆ ಮತ್ತು ಮುಮ್ಮೇಳದಲ್ಲಿ ಭೀಷ್ಮನಾಗಿ ವಿದ್ಯಾವಾಚಸ್ಪತಿ ಉಮಾಕಾಂತ ಭಟ್, ಕೃಷ್ಣನಾಗಿ ಎಂ.ಎನ್ ಹೆಗಡೆ ಮತ್ತು ಅರ್ಜುನನಾಗಿ ಮಹೇಶ್ ಭಟ್ ಭಾಗವಹಿಸಲಿದ್ದಾರೆ.

ಸಂಜೆ 5:30ಕ್ಕೆ ನಡೆಯಲಿರುವ ಸಭಾ ಕಾರ್ಯಕ್ರಮದಲ್ಲಿ ಖ್ಯಾತವಾಗ್ಮಿಗಳು ಮತ್ತು ಶಿಕ್ಷಣ ತಜ್ಞರಾದ ಆದರ್ಶ ಗೋಕುಲೆ ಅವರಿಂದ ಪ್ರಧಾನ ಭಾಷಣ ಇರಲಿದೆ. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಗೌರವ ಸನ್ಮಾನ ನಡೆಯಲಿದೆ.

ರಕ್ಷಣಾ ಕ್ಷೇತ್ರದಲ್ಲಿ ಮೇಜರ್ ಗಣಪತಿ ಹೆಗಡೆ, ಉದ್ಯಮ ಕ್ಷೇತ್ರದಲ್ಲಿ ರಾಮನಾಥ ಭಟ್ ಅಡಿಕೆಪಾಲ್, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸತೀಶ್ ಯಲ್ಲಾಪುರ, ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ರಾಧಾಕೃಷ್ಣ ನಾಯ್ಕ, ಪಶು ವೈದ್ಯಕೀಯ ಕ್ಷೇತ್ರದಲ್ಲಿ ನಾರಾಯಣ ಹೆಗಡೆ ಕೃಷಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಗುರು ಭಟ್ ಮಂಚಿಕೇರಿ ಇವರಿಗೆ ಗೌರವ ಸನ್ಮಾನ




ವಿಶ್ವದರ್ಶನ ಶಿಕ್ಷಣ ಸಮೂಹದ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿಶ್ವದರ್ಶನ ಸಂಭ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಮಾಡಲಾಗುತ್ತದೆ.

ನವೆಂಬರ್ 29ರಂದು ಬೆಳಿಗ್ಗೆ 10.30 ಗಂಟೆಗೆ ವಿಶ್ವ ದರ್ಶನ ಸಂಸ್ಥೆಯ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ಮಧ್ಯಾಹ್ನ 3:30 ಗಂಟೆಯಿಂದ ಶಂಕರ್ ಶಾನುಭಾಗ್ ಹಾಗೂ ಬಳಗದವರಿಂದ ಕಾವ್ಯ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೆ 5:30ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಯೋಗ ಗುರು ಹಾಗೂ ಪತಂಜಲಿ ಯೋಗ ಪೀಠದ ರಾಜ್ಯ ಪ್ರಭಾವಿ ಶ್ರೀ ಭವರ ಲಾಲ್ ಆರ್ಯ ಅವರಿಗೆ ವಿಶ್ವದರ್ಶನ ಪುರಸ್ಕಾರ ನೀಡಿ ಗೌರವಿಸಲಾಗುತ್ತದೆ. ರೊಟ್ಟಿಗೆ ಸಾಧಕರಿಗೆ ಗೌರವ ಸನ್ಮಾನ ಕೂಡ ಇರಲಿದೆ. ಅದು ಸಂಸ್ಕೃತ ಮತ್ತು ಸಾಂಸ್ಕೃತಿ ಕ್ಷೇತ್ರದಲ್ಲಿ ಗೋಪಾಲಕೃಷ್ಣ ಭಟ್ ಹಂಡ್ರ್ಮನೆ, ವೈದ್ಯಕೀಯ ಕ್ಷೇತ್ರದಲ್ಲಿ ಜಿ.ಪಿ ಭಟ್ ಕಣ್ಣಿ, ಉದ್ಯಮ ಕ್ಷೇತ್ರದಲ್ಲಿ ಶ್ರೀನಿವಾಸ ಅಡಿಕೆಸರ, ಕೃಷಿ ಕ್ಷೇತ್ರದಲ್ಲಿ ಬಸವರಾಜ್ ಓಶಿಮಠ, ಸಾಹಿತ್ಯ ಕ್ಷೇತ್ರದಲ್ಲಿ ಬಿರಣ್ಣ ನಾಯಕ್ ಮೋಗಟಾ ಹಾಗೂ ಭರತನಾಟ್ಯದಲ್ಲಿ ಸುಮಾ ತೊಂಡೆಕೆರೆ ಇವರನ್ನು ಗೌರವಿಸಿ ಸನ್ಮಾನಿಸಲಾಗುತ್ತದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಶಾಂತರಾಮ್ ಸಿದ್ದಿ ಮತ್ತು ಬೀದರಿನ ಖ್ಯಾತ ಉದ್ಯಮಿಗಳಾದ ಚನ್ನಬಸಣ್ಣ ಬಳತೆ ಉಪಸ್ಥಿತರಿರಲಿದ್ದಾರೆ. ರಾತ್ರಿ 10 ಗಂಟೆಯಿಂದ ಶಿವನಾದ ಕಲಾ ಸೌರಭ ಮಲವಳ್ಳಿ ಇವರಿಂದ ಭಕ್ತ ಪ್ರಹ್ಲಾದ ಎಂಬ ಪೌರಾಣಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಶಿಕ್ಷಣ ಕೇವಲ ಕ್ಲಾಸ್ ರೂಮಿಗೆ ಅಷ್ಟೇ ಸೀಮಿತವಾಗಿರಬಾರದು ಅದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಬೇಕು. ಇದೆ ಹಾದಿಯಲ್ಲಿ ನಮ್ಮ ವಿಶ್ವದರ್ಶನ ಶಿಕ್ಷಣ ಸಮೂಹ ನಡೆಯುತ್ತಿದೆ.

ನಮ್ಮಲ್ಲಿ ಪಿ.ಯು ಕಾಲೇಜ್ ಆರಂಭವಾಗಿ 3 ಬ್ಯಾಚಗಳು ಪೂರ್ಣಗೊಂಡಿವೆ. ಮುಂದಿನ ವರ್ಷದಿಂದ ವಸತಿ ಸಹಿತವಾಗಿ ಇದು ಆರಂಭವಾಗಲಿದೆ. ಹಾಗೂ ಸಿ.ಇ.ಟಿ, ನೀಟ್, ಜೆಇ.ಇ ತರಬೇತಿ ಹಾಗೂ ಕಾಮರ್ಸ್ ವಿಧ್ಯಾರ್ಥಿಗಳಿಗೆ ಸಿ.ಎ ಹಾಗೂ ವಿವಿಧ ಬ್ಯಾಂಕಿಂಗ್ ಎಕ್ಸಾಂಗಳಿಗೆ ತರಬೇತಿ ನೀಡಲಾಗುತ್ತದೆ. ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಎಂಟನೇಯ ತರಗತಿಯಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡುವುದರ ಮೂಲಕ ಸ್ಪರ್ಧಾ ಮನೋಭಾವ ಬೆಳೆಸಿ ವಿದ್ಯಾರ್ಥಿಗಳು ಉನ್ನತ ಹುದ್ದೆಗೆರುವ ಕನಸನ್ನು ಸಾಕಾರಗೊಳಿಸಲು ಪ್ರಯತ್ನಿಸುತ್ತೇವೆ. ಯಾವುದೇ ವಿದ್ಯಾರ್ಥಿಯ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆ ಆಗದಂತೆ ಕೈಗೆಟ್ಟುಗುವ ದರದಲ್ಲಿ ತರಬೇತಿಯನ್ನು ನೀಡಲಾಗುತ್ತದೆ.

ಪ್ರತಿಯೊಂದು ವ್ಯವಸ್ಥಿತವಾಗಿ ಇರುವಂತೆ ಹಾಗೂ ಮಕ್ಕಳಿಗೆ ಹಾಸ್ಟೇಲ್ ಗಿಂತ ಹೆಚ್ಚಾಗಿ ಒಂದು ಸಂಸ್ಕಾರ ಕೇಂದ್ರವನ್ನಾಗಿಸುವತ್ತ ಒತ್ತು ನೀಡುತ್ತೇವೆ. ನಮ್ಮ ಮಾಧ್ಯಮ ಶಾಲೆಯ ಪ್ರತಿ ವಿದ್ಯಾರ್ಥಿ ಇಂದು ಜಿಲ್ಲಾ ಹಾಗೂ ರಾಜ್ಯಮಟ್ಟದ ವಿವಿಧ ಸುದ್ಧಿ ಸಂಸ್ಥೆಗಳಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ ಎಂದು ಹೇಳಿದರು.


ಕಾರ್ಯಕ್ರಮದಲ್ಲಿ ಬಿ.ಸಿ.ಎ ವಿಭಾಗದ ಮುಖ್ಯಸ್ಥ ಪ್ರಸನ್ನ ಭಟ್, ಹಿರಿಯ ಪತ್ರಕರ್ತ ಟಿ ಶಂಕರ್ ಭಟ್, ಕನ್ನಡ ಮಾಧ್ಯಮ ಪ್ರೌಢಶಾಲಾ ಉಪನ್ಯಾಸಕಿ ಪ್ರೇಮ ಗಾಂವ್ಕರ್, ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರು ಮತ್ತು ಪತ್ರಕರ್ತರು ಉಪಸ್ಥಿತರಿದ್ದರು.

# ಬೆಂಗಳೂರು ಟ್ವೀನ್ ಟನಲ್ ಯೋಜನೆ, ಅಭಿವೃದ್ಧಿಯೋ? ಪರಿಸರ ಹಾನಿಯೋ?

**ಇಡೀ ದಕ್ಷಿಣ ಭಾರತಕ್ಕೆ ಬುನಾದಿಯಾದ ಶಿಲಾರಚನೆಯು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿದೆ. ಈ ಪ್ರಾಂತ್ಯದಲ್ಲಿ ಭೂಕಂಪದ ಪ್ರಭಾವವನ್ನು ತಗ್ಗಿಸುವಲ್ಲಿ ಈ ರಚನೆ ನೆರವಾಗಿದೆ ಎನ್ನುವುದು ಪರಿತರ ಅಭಿಮತ. 300 ಕೋಟಿಗಳಿಂದ ಭೂಮಿ ಮೇಲಿನ ಸ್ಥಿತ್ಯಂತರಗಳನ್ನು ಎದುರಿಸಿ ನಿಂತಿರುವ ಇತಿಹಾಸದ ಈ ರಚನೆಯ ಅಸ್ತಿತ್ವಕ್ಕೆ ಈಗ 16.7 ಉದ್ದದ ಸುರಂಗ ರಸ್ತೆ ನಿರ್ಮಾಣ ಯೋಜನೆ ಆತಂಕ ತಂದಿದೆ. ಅಭಿವೃದ್ಧಿ ವಿಚಾರವೂ ಮುನ್ನೆಲೆಗೆ ಬಂದಿದೆ.ತಿ**


ಬೆಂಗಳೂರು ಮಹಾನಗರದಲ್ಲಿ ಹೆಚ್ಚುತ್ತಿರುವ ವಾಹನಗಳಿಂದ ಉಂಟಾಗಿರುವ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಉದ್ದೇಶಿಸಿರುವ ಸುರಂಗ ರಸ್ತೆ ನಿರ್ಮಾಣ ಯೋಜನೆ ಆರಂಭದಲ್ಲೇ ವಿವಾದದ ಸ್ವರೂಪ ಪಡೆದುಕೊಂಡಿದೆ. ರಾಜ್ಯ ಸರಕಾರ ನಿರ್ಮಿಸಲು ಉದ್ದೇಶಿಸಿರುವ ಈ ಟ್ವಿನ್ ಟ್ಯೂಬ್ ಟನಲ್ ನಿಂದ ಮಹಾನಗರದ ಶ್ವಾಸಕೋಶದಂತಿರುವ ಲಾಲ್ ಬಾಗ್‌ನ ಜೀವವೈವಿಧ್ಯಕ್ಕೆ ಹಾನಿಯಾಗಲಿದೆ ಎಂದು ಪರಿಸರ ಪ್ರೇಮಿಗಳು, ಸಂಘ-ಸಂಸ್ಥೆಗಳ ಆತಂಕ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಒಳಚರಂಡಿ, ರಾಜಕಾಲುವೆ, ಕೆರೆಗಳಿಗೂ ಈ ಸುರಂಗ ರಸ್ತೆ ಯೋಜನೆಯಿಂದ ಸಮಸ್ಯೆ ತಲೆದೋರುವ ಆತಂಕವಿದೆ. ಈ ಕಾರಣದಿಂದ ಯೋಜನೆಯನ್ನು ಪ್ರಶ್ನಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ದೂರು ಸಲ್ಲಿಕೆಯಾಗಿದೆ. ಹೈಕೋರ್ಟ್‌ಲ್ಲೂ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.


ಸಸ್ಯಕಾಶಿ ಲಾಲ್‌ಬಾಗ್ ಅನ್ನು ಬ್ರಿಟಿಷರ ಕಾಲದಿಂದಲೂ ಉಳಿಸಿಕೊಂಡು ಬರಲಾಗಿದೆ. ಕೆಂಪೇಗೌಡ ಗಡಿಗೋಪುರದ ಅಡಿಯಲ್ಲಿರುವ ಬಂಡೆಯನ್ನು 1975ರಲ್ಲೇ ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ, ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕವೆಂದು ಘೋಷಿಸಿದೆ. ಇದು ದಕ್ಷಿಣ ಭಾರತದ ಪ್ರಾತಿನಿಧಿಕ ಶಿಲೆಯಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯು ಈ ಶಿಲೆಯು 300 ಕೋಟಿ ವರ್ಷಗಳಷ್ಟು ಹಳೆಯದೆಂದು ಹೇಳಿದೆ. ಸುರಂಗ ನಿರ್ಮಾಣದ ವೇಳೆ ಸ್ಫೋಟಕಗಳನ್ನು ಬಳಸಲಾಗುತ್ತದೆ. ಇದರಿಂದ ಅಪರೂಪದ ಶಿಲೆ, ಸ್ಮಾರಕವು ಛಿದ್ರಗೊಳ್ಳಲಿದೆ. ಇದು ಅತ್ಯಂತ ಆಘಾತಕಾರಿ ಸಂಗತಿಯಾಗಿದೆ.ರಾಜ್ಯ ಸರ್ಕಾರದ ವಿರುದ್ಧ ಪರಿಸರ ಪ್ರೇಮಿಗಳು, ಸಾಮಾನ್ಯ ಜನರು, ಪರಿಣಿತರು ಆಕ್ರೋಶವನ್ನು ಹೊರಹಾಕುತ್ತಿದ್ದಾರೆ.




## ಬೆಂಗಳೂರು ಟನಲ್ ಪ್ರಾಜೆಕ್ಟ್ ಮುಖ್ಯ ಮಾರ್ಗಗಳು

| ಮೊದಲನೇ ಮಾರ್ಗ | ಎರಡನೇ ಮಾರ್ಗ |
|---|---|
| ಹೆಬ್ಬಾಳ ಫ್ಲೈಓವರ್ | ಪೀಣ್ಯಾ |
| ಮೆಜೆಸ್ಟಿಕ್ | ರಾಜಾಜಿನಗರ |
| ಮಿನರ್ವ ಸರ್ಕಲ್ | ಮಲ್ಲೇಶ್ವರಂ |
| ವಿಲ್ಸನ್ ಗಾರ್ಡನ್ | ಬ್ರಿಗೇಡ್ ರಸ್ತೆ |
| ಶಾಂತಿನಗರ ಭಾಗ | ರಿಚ್ಮಂಡ್ ಸರ್ಕಲ್ |
| ಜಯನಗರ | ಕೊರಮಂಗಲ |
| ಸಿಲ್ಕ್ ಬೋರ್ಡ್ | ಸಿಲ್ಕ್ ಬೋರ್ಡ್ |





ಇಡೀ ದಕ್ಷಿಣ ಭಾರತಕ್ಕೆ ಬುನಾದಿಯಾದ ಶಿಲಾರಚನೆಯು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿದೆ. ಈ ಪ್ರಾಂತ್ಯದಲ್ಲಿ ಭೂಕಂಪದ ಪ್ರಭಾವವನ್ನು ತಗ್ಗಿಸುವಲ್ಲಿ ಈ ರಚನೆ ನೆರವಾಗಿದೆ ಎನ್ನುವುದು ಪರಿಣತರ ಅಭಿಮತ. 300 ಕೋಟಿಗಳಿಂದ ಭೂಮಿ ಮೇಲಿನ ಸ್ಥಿತ್ಯಂತರಗಳನ್ನು ಎದುರಿಸಿ ನಿಂತಿರುವ ಇತಿಹಾಸದ ಈ ರಚನೆಯ ಅಸ್ತಿತ್ವಕ್ಕೆ ಈಗ 16.7 ಉದ್ದದ ಸುರಂಗ ರಸ್ತೆ ನಿರ್ಮಾಣ ಯೋಜನೆತಿಆತಂಕ ತಂದಿದೆ. ಅಭಿವೃದ್ಧಿ ವಿಚಾರವೂ ಮುನ್ನೆಲೆಗೆ ಬಂದಿದೆ. ಬೆಂಗಳೂರು ಮಹಾನಗರದಲ್ಲಿ ಹೆಚ್ಚುತ್ತಿರುವ ವಾಹನಗಳಿಂದ ಉಂಟಾಗಿರುವ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಉದ್ದೇಶಿಸಿರುವ ಸುರಂಗ ರಸ್ತೆ ನಿರ್ಮಾಣ ಯೋಜನೆ ಆರಂಭದಲ್ಲೇ ವಿವಾದದ ಸ್ವರೂಪ ಪಡೆದುಕೊಂಡಿದೆ.

ರಾಜ್ಯ ಸರಕಾರ ನಿರ್ಮಿಸಲು ಉದ್ದೇಶಿಸಿರುವ ಈ ಟ್ವಿನ್ ಟ್ಯೂಬ್ ಟನಲ್ ನಿಂದ ಮಹಾನಗರದ ಶ್ವಾಸಕೋಶದಂತಿರುವ ಲಾಲ್ ಬಾಗ್‌ನ ಜೀವವೈವಿಧ್ಯಕ್ಕೆ ಹಾನಿಯಾಗಲಿದೆ ಎಂದು ಪರಿಸರ ಪ್ರೇಮಿಗಳು, ಸಂಘ-ಸಂಸ್ಥೆಗಳ ಆತಂಕ ವ್ಯಕ್ತಪಡಿಸಿದ್ದಾರೆ.ಅಲ್ಲದೆ ಒಳಚರಂಡಿ, ರಾಜಕಾಲುವೆ, ಕೆರೆಗಳಿಗೂ ಈ ಸುರಂಗ ರಸ್ತೆ ಯೋಜನೆಯಿಂದ ಸಮಸ್ಯೆ ತಲೆದೋರುವ ಆತಂಕವಿದೆ. ಈ ಕಾರಣದಿಂದ ಯೋಜನೆಯನ್ನು ಪ್ರಶ್ನಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ದೂರು ಸಲ್ಲಿಕೆಯಾಗಿದೆ. ಹೈಕೋರ್ಟ್‌ಲ್ಲೂ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಸಸ್ಯಕಾಶಿ ಲಾಲ್‌ಬಾಗ್ ಅನ್ನು ಬ್ರಿಟಿಷರ ಕಾಲದಿಂದಲೂ ಉಳಿಸಿಕೊಂಡು ಬರಲಾಗಿದೆ. ಕೆಂಪೇಗೌಡ ಗಡಿಗೋಪುರದ ಅಡಿಯಲ್ಲಿರುವ ಬಂಡೆಯನ್ನು 1975ರಲ್ಲೇ ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ, ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕವೆಂದು ಘೋಷಿಸಿದೆ. ಇದು ದಕ್ಷಿಣ ಭಾರತದ ಪ್ರಾತಿನಿಧಿಕ ಶಿಲೆಯಾಗಿದೆ. ಭಾರತೀಯವಿಜ್ಞಾನ ಸಂಸ್ಥೆಯು ಈ ಶಿಲೆಯು 300 ಕೋಟಿವರ್ಷಗಳಷ್ಟು ಹಳೆಯದೆಂದುಹೇಳಿದೆ. ಸುರಂಗ ನಿರ್ಮಾಣದ ವೇಳೆ ಸ್ಫೋಟಕಗಳನ್ನು ಬಳಸಲಾಗುತ್ತದೆ.

### ವಿವಾದಕ್ಕೆ ಕಾರಣವಾದ ಅಂಶಗಳು

- ಪರಿಸರ ಹಾನಿ
- ಹಾದಿಯಲ್ಲಿರುವ ಸುತ್ತಮುತ್ತ 2500–3000 ಮರಗಳನ್ನು ಕಡಿತ ಮಾಡುವ ಸಾಧ್ಯತೆ
- ಭೂಗರ್ಭ ಜಲಮಟ್ಟದ ಮೇಲೆ ಪರಿಣಾಮ
- ನಿರ್ಮಾಣದ ಸಮಯದಲ್ಲಿ ಧೂಳು, ಶಬ್ದ ಮಾಲಿನ್ಯ
- ಪರಿಸರವಾದಿಗಳ ತೀವ್ರ ವಿರೋಧ

ಬೆಂಗಳೂರು ನಗರದ ಎದ್ದೇಳುತ್ತಿರುವ ಟ್ರಾಫಿಕ್ ಸಮಸ್ಯೆಗೆ ದೀರ್ಘಕಾಲೀನ ಪರಿಹಾರ ಹುಡುಕುವ ಪ್ರಯತ್ನದಲ್ಲೇ ಟನಲ್ ರಸ್ತೆಯಂತಹ ಮಹತ್ತರ ಯೋಜನೆ ರೂಪವಾಗಿದೆ. ನಗರದಲ್ಲಿ ದಿನೇದಿನೇ ಹೆಚ್ಚುತ್ತಿರುವ ವಾಹನಗಳ ಸಂಖ್ಯೆ, ಕುಂಠಿತವಾಗುತ್ತಿರುವ ರಸ್ತೆ ಸಾಮರ್ಥ್ಯ ಮತ್ತು ಪ್ರಮುಖ ಜಂಕ್ಷನ್‌ಗಳಲ್ಲಿ ಉಂಟಾಗುತ್ತಿರುವ ದಟ್ಟಣೆಗೆ ತಂತ್ರಜ್ಞಾನದ ಆಧಾರಿತ ಪರಿಹಾರ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಂಡರ್‌ಗ್ರೌಂಡ್ ಟನಲ್‌ಗಳನ್ನು ನಿರ್ಮಿಸುವುದರಿಂದ ನಗರ ಮೇಲ್ಮೈ ಸಂಚಾರದ ಒತ್ತಡವನ್ನು ಕಡಿಮೆ ಮಾಡಬಹುದು ಮತ್ತು ಪ್ರಯಾಣ ಸಮಯವನ್ನು ಪರಿಣಾಮಕಾರಿಯಾಗಿ ಕುಗ್ಗಿಸಬಹುದು ಎಂಬ ನಂಬಿಕೆ ಇದೆ.


ಆದರೆ ಯೋಜನೆಯ ಸಕಾರಾತ್ಮಕ ಅಂಶಗಳ ಜೊತೆಗೆ ಪರಿಸರ, ಧನವ್ಯಯ ಮತ್ತು ತಾಂತ್ರಿಕ ಸಂಕೀರ್ಣತೆಗಳ ವಿಚಾರವೂ ಗಂಭೀರವಾಗಿದೆ. ಲಾಲ್‌ಬಾಗ್ ಸೇರಿದಂತೆ ಸಂವೇದನಾಶೀಲ ಪ್ರದೇಶಗಳ ಭೂಗರ್ಭದ ರಚನೆಗೆ ಇದು ಪರಿಣಾಮ ಬೀರಬಹುದಾದರಿಂದ ಪರಿಸರವಾದಿಗಳು ತಮ್ಮ ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ, ಯೋಜನೆಗೆ ಅಗತ್ಯವಿರುವ ಸಾವಿರಾರು ಕೋಟಿಗಳ ವೆಚ್ಚವನ್ನು ಸಮರ್ಥಿಸಲು ಸರ್ಕಾರವು ಸ್ಪಷ್ಟವಾದ ಅಧ್ಯಯನ ಮತ್ತು ಸಾರ್ವಜನಿಕ ಸಲಹೆಗಳನ್ನು ನೀಡಬೇಕಾಗಿದೆ.

ಒಟ್ಟಿನಲ್ಲಿ, ಟನಲ್ ರಸ್ತೆ ಯೋಜನೆ ಬೆಂಗಳೂರಿನ ಭವಿಷ್ಯದ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ಸಾಮರ್ಥ್ಯ ಹೊಂದಿದ್ದರೂ, ಇದರ ಅನುಷ್ಠಾನವು ಸಂಪೂರ್ಣ ಪಾರದರ್ಶಕತೆ, ವೈಜ್ಞಾನಿಕ ಅಧ್ಯಯನ ಮತ್ತು ಸಾರ್ವಜನಿಕ ಹಿತಾಸಕ್ತಿ ಆಧಾರಿತವಾಗಿರಬೇಕು. ಸಮಗ್ರ ಮತ್ತು ಜವಾಬ್ದಾರಿಯುತ ನಿರ್ಧಾರಗಳನ್ನು ಕೈಗೊಂಡಾಗ ಮಾತ್ರ ಈ ಯೋಜನೆ ನಿಜವಾದ ಅರ್ಥದಲ್ಲಿ ನಗರಕ್ಕೆ ಪ್ರಯೋಜನಕಾರಿ ಆಗಲು ಸಾಧ್ಯ.

ಇದಲ್ಲದೇ, ನಗರ ನಿವಾಸಿಗಳ ಧ್ವನಿಗೂ ಮಹತ್ವ ನೀಡಬೇಕು. ಯೋಜನೆಯ ಬಗ್ಗೆ ಸ್ಪಷ್ಟ ಮಾಹಿತಿ, ಪಾರದರ್ಶಕ ವರದಿಗಳು, ತಜ್ಞರ ಅಧ್ಯಯನಗಳು ಹಾಗೂ ಸಾರ್ವಜನಿಕ ಸಮಾಲೋಚನೆಗಳು ನಡೆದಾಗ ಮಾತ್ರ ಜನರಲ್ಲಿ ವಿಶ್ವಾಸ ಹೆಚ್ಚುತ್ತದೆ. ಅಭಿವೃದ್ಧಿ ಮತ್ತು ಪರಿಸರದ ಮಧ್ಯೆ ಸಮತೋಲನ ಕಾಯ್ದುಕೊಂಡಾಗ ಮಾತ್ರ ಈ ಯೋಜನೆ ನಿಜವಾದ ಯಶಸ್ಸು ಕಾಣುತ್ತದೆ.

ಒಟ್ಟಿನಲ್ಲಿ, ಟನಲ್ ರಸ್ತೆ ಯೋಜನೆ ಬೆಂಗಳೂ-ರಿನ ಭವಿಷ್ಯಕ್ಕೆ ಒಂದು ಮಹತ್ವದ ಮಾರ್ಗದರ್ಶಕ ಹೆಜ್ಜೆಯಾಗಬಹುದು. ಆದರೆ ಅದು ಯಶಸ್ವಿಯಾಗಲು ಜವಾಬ್ದಾರಿಯುತ ಯೋಜನೆ, ವಿಜ್ಞಾನಾಧಾರಿತ ನಿರ್ಧಾರಗಳು ಮತ್ತು ಜನಪರ ಕಾರ್ಯಪದ್ಧತಿಗಳು ಅತ್ಯಂತ ಅವಶ್ಯಕ. ಈ ಎಲ್ಲ ಅಂಶಗಳು ಒಟ್ಟುಗೂಡಿದಾಗ ಮಾತ್ರ ಈ ಯೋಜನೆ ಬೆಂಗಳೂರು ನಗರದ ಸಂಚಾರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಸಾಮರ್ಥ್ಯ ಹೊಂದುತ್ತದೆ.

# ಮಕ್ಕಳ ದಿನಾಚರಣೆ



ಭಾರತದಮೊದಲಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು ಅಲಹಾಬಾದ್‌ನಲ್ಲಿ 14 ನವೆಂಬರ್ 1889 ರಂದು ಜನಿಸಿದರು. ಅವ-ರಿಗೆ ಮಕ್ಕಳ ಕುರಿತು ಅಪಾರ ಪ್ರೀತಿ. ಇವರ ಜನ್ಮ ದಿನವನ್ನೇ ಮಕ್ಕಳ ದಿನಾಚರಣೆಯಾಗಿ ಪ್ರತಿವರ್ಷ ಆಚರಿಸಲಾಗುತ್ತದೆ. ಮಕ್ಕಳ ಹಕ್ಕುಗಳು, ಶಿಕ್ಷಣ ಮತ್ತು ಕಲ್ಯಾಣದ ಬಗ್ಗೆ ಜಾಗೃತಿ ಮೂಡಿಸಲು ಭಾರತದಲ್ಲಿ ಈ ದಿನ ಮೀಸಲಿರಿಸಲಾಗಿದೆ. ಮಕ್ಕಳಿಗಾಗಿ ಅನೇಕ ಶೈಕ್ಷಣಿಕ ಮತ್ತು ಪ್ರೇರಕ ಕಾರ್ಯಕ್ರಮಗಳನ್ನು ಭಾರತದಾದ್ಯಂತ ನಡೆಸಲಾಗುತ್ತದೆ.


ಜಾಗತಿಕವಾಗಿ ಮಕ್ಕಳ ದಿನಾಚರಣೆಯು ನವೆಂಬರ್ 5, 1948ರಂದು ಹೂವಿನ ದಿನ, ಫ್ಲವರ್ಸ್ ಯಿತು. 30 ಜುಲೈ 1949 ರಂದು ಮಕ್ಕಳ ದಿನ ಹೆಸರಿನಲ್ಲಿ ಆರಂಭಿಸಲಾಯಿತು. 1951ರಲ್ಲಿ ವಿಶ್ವಸಂಸ್ಥೆಯ ಸಮಾಜ ಕಲ್ಯಾಣ ಫೆಲೋ ಆಗಿದ್ದ ವಿಎಂ ಕುಲಕರ್ಣಿಯವರು ಮಕ್ಕಳ ದಿನಕ್ಕೆ ಪಂಡಿತ್ ನೆಹರು ಅವರ ಜನ್ಮದಿನವನ್ನು ಧ್ವಜ ದಿನವೆಂದು ಗುರುತಿಸಬಹುದು ಎಂದು ಶಿಫಾರಸು ಮಾಡಿದರು. ಭಾರತದಲ್ಲಿ ನೆಹರೂ ಅವರ ಒಪ್ಪಿಗೆ ಕೇಳಿದಾಗ ಮೊದಲು ಒಪ್ಪಲಿಲ್ಲ. ಬಳಿಕ ಮನಸ್ಸಿಲ್ಲದೆ ಒಪ್ಪಿಕೊಂಡರು. ಬಳಿಕ ಇದು ಮಕ್ಕಳ ದಿನಾಚರಣೆಯಾಗಿ ಜನಪ್ರಿಯತೆ ಪಡೆಯಿತು. 1954ರಲ್ಲಿ ಮೊದಲ ಬಾರಿಗೆ ಮಕ್ಕಳ ದಿನ ಎಂದು ಆಚರಿಸಲಾಯಿತು. ದೆಹಲಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ 50,000 ಕ್ಕೂ ಹೆಚ್ಚು ಶಾಲಾ ಮಕ್ಕಳು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡರು. ಆದರೆ, ಅಧಿಕೃತವಾಗಿ ಮಕ್ಕಳ ದಿನಾಚರಣೆ ಆರಂಭವಾದದ್ದು 1957ರಲ್ಲಿ ಎಂದು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು. ನವೆಂಬರ್ 14, 1957 ರಂದು ದೆಹಲಿಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಹಲವಾರು ಬಿಳಿ ಪಾರಿವಾಳಗಳನ್ನು ಹಾರಿ ಬಿಡಲಾಯಿತು. ಒಂದು ಪಾರಿವಾಳವು ಹಿಂತಿರುಗಿ ಬಂದು ನೆಹರು ಅವರ ತಲೆಯ ಮೇಲೆ ಕುಳಿತಿತು. 1957ರಲ್ಲಿ ವಿಶೇಷ ಸರ್ಕಾರಿ ಸುಗ್ರೀವಾಜ್ಞೆಯ ಮೂಲಕ 14 ನವೆಂಬರ್ ಅನ್ನು ಭಾರತದಲ್ಲಿ ಅಧಿಕೃತವಾಗಿ ಮಕ್ಕಳ ದಿನವೆಂದು ಘೋಷಿಸಲಾಯಿತು.

ಭಾರತದ ಪ್ರತಿಶಾಲೆಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಮಕ್ಕಳ ದಿನ ಆಚ-ರಿಸಲಾಗುತ್ತದೆ. ರಸಪ್ರಶ್ನೆ, ಚರ್ಚೆಗಳು, ನೃತ್ಯ, ಸಂಗೀತ ಮತ್ತು ನಾಟಕದಂತಹ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುತ್ತದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ ಮತ್ತು ಪ್ರದರ್ಶಿಸುತ್ತಾರೆ. ಮಗುವು ನಾಳಿನ ಭವಿಷ್ಯ ಎಂದು ನಂಬಿದ್ದರು. ಅನೇಕ ಶಾಲೆಗಳು ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ಮಕ್ಕಳ ದಿನವನ್ನು ಆಚರಿಸುತ್ತವೆ. ಶಾಲೆಯ ಶಿಕ್ಷಕರು ಸಾಮಾನ್ಯವಾಗಿ ಹತ್ತಿರದ ಅನಾಥಾಶ್ರಮ ಅಥವಾ ಕೊಳೆಗೇರಿಯ ಮಕ್ಕಳನ್ನು ಆಹ್ವಾನಿಸುತ್ತಾರೆ. ಮಕ್ಕಳು ತಮ್ಮೊಂದಿಗೆ ಸಮಾಜದ ಎಲ್ಲರನ್ನು ಹಂಚಿಕೊಳ್ಳಲು ಮತ್ತು ಹೊಂದಿಕೊಳ್ಳಲು ಕಲಿಯಬೇಕೆನ್ನುವುದು ಇದರ ಉದ್ದೇಶ. ಇದರೊಂದಿಗೆ ಶಿಕ್ಷಣದ ಮಹತ್ವವನ್ನು ಹೇಳಲಾಗುತ್ತದೆ. ಕ್ರೀಡೆ, ಶಿಕ್ಷಣ, ಸಾಂಸ್ಕೃತಿಕ ಮತ್ತು ಮನರಂಜನಾ ಕ್ಷೇತ್ರದಂತಹ ವಿವಿಧ ಕ್ಷೇತ್ರಗಳ ಸ್ಫೂರ್ತಿದಾಯಕ ವ್ಯಕ್ತಿಗಳು ಬಂದು ವಿದ್ಯಾರ್ಥಿಗಳಿಗೆ ಪ್ರೇರಕ ಭಾಷಣವನ್ನು ನೀಡುತ್ತಾರೆ.

ಹಲವಾರು ಎನ್‌ಜಿ.ಒ.ಗಳು ಈ ದಿನವನ್ನು ಅವಕಾಶ ವಂಚಿತ ಮಕ್ಕಳಿಗೆ ಸಹಾಯ ಹಸ್ತ ನೀಡಲು ಬಳಸುತ್ತವೆ. ಹಿಂದುಳಿದ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಸಹ ಆಯೋಜಿಸುತ್ತಾರೆ

✍ ಪ್ರಭು ವಡ್ಡರ್

# ಬೀದಿ ನಾಯಿಗಳ ಮೇಲೆ ಕರುಣೆ ಇರಲಿ



ಬೀದಿ ನಾಯಿಗಳ ಮೇಲೆ ದೌರ್ಜನ್ಯ ಇಂದಿನ ದಿನಮಾನದಲ್ಲಿ ಸಾಮಾನ್ಯ ವಿಷಯವಾಗಿದೆ.ನಾಯಿಗಳ ಮೇಲೆ ಸಾರ್ವಜನಿಕ ಸ್ಥಳಗಳಲ್ಲಿ ಕಿರುಕುಳ ನಡೆಯುವುದು ಒಂದು ಸಮಸ್ಯೆಯಾದರೆ. ನಾಯಿಗಳ ಮೇಲೆ ಆಗುತ್ತಿರುವ ಅಮಾನವೀಯ ಘಟನೆಗಳು ಇನೊಂದೆಡೆ. ನಾಯಿಗಳನ್ನು ನಿರ್ವಹಿಸುವಲ್ಲಿ ವೈಫಲ್ಯ ಮತ್ತು ಅವುಗಳ ಮೇಲಿನ ಹಿಂಸಾಚಾರದ ಘಟನೆಗಳು ಕೂಡ ನಡೆದಿವೆ. ನಾಯಿಗಳಿಗೆ ವಿಷವು ನೀಡುವುದು ಅಲ್ಲದೆ, ನಾಯಿಗಳ ಮೇಲೆ ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಕೂಡ ವರದಿಯಾಗಿರುವುದು ನಾವು ಆಗಾಗೇ ಪತ್ರಿಕೆಗಳಲ್ಲಿ ಪ್ರಕಟವಾಗುವುದನ್ನು ನೋಡಿರಬಹುದು.

ಈ ರೀತಿಯ ಘಟನೆಗಳು ಪ್ರಾಣಿ ಹಿಂಸೆ ಮತ್ತು ಸುರಕ್ಷತೆಯ ಬಗ್ಗೆ ಆತಂಕ ಮೂಡಿಸುವಂತೆ ಮಾಡಿದೆ.ಇದು ಕೇವಲ ಬೀದಿ ನಾಯಿಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಿಂಸೆ ಮಾತ್ರವಲ್ಲ, ಇನ್ನೂ ಅನೇಕ ಪ್ರಾಣಿ ಪ್ರಭೇದದ ಮೇಲೆ ಆಗುತ್ತಿರುವ ಹಿಂಸೆಯಾಗಿದೆ. ಇಂದಿನ ಪ್ರಜ್ಞಾವಂತ ಜನರು ಇದ್ಯಾವುದರ ಬಗ್ಗೆ ಮಾತನಾಡುವುದಿಲ್ಲ, ಅವರು ಒಂದು ಬೀದಿ ನಾಯಿ ಸಾರ್ವಜನಿಕ ಸ್ಥಳಗಳಲ್ಲಿ ಜನರ ಮೇಲೆ ದಾಳಿ ಮಾಡುತ್ತೋ ಆಗ ರಾಧನಂತವೆ ಮಾಡಿ ಬಿಡುತ್ತಾರೆ. ಇಲ್ಲಿ ಅವರ ಆಕ್ರೋಶ ತಪ್ಪೆಂದಲ್ಲ, ಅದು ಸರಿಯೇ. ಆದರೆ ನಾಯಿಗಳ ಮೇಲೆ ದೌರ್ಜನ್ಯವಾದಾಗ ಕೂಡಾ ಮಾನವೀಯ ಭಾವದಿಂದಾದರೂ ಸರಿ ಒಮ್ಮೆ ಪ್ರಶ್ನಿಸುವ ಮನಸ್ಥಿತಿ ಇದ್ದರೆ ಒಳ್ಳೆಯದು. ಅವುಕ್ಕೂ ನ್ಯಾಯ ಸಿಕಂತಾಗುತ್ತದೆ.

ನಾಯಿಗಳಿಗೂ ಯಾವುದೇ ತೊಂದರೆ ಆಗಬಾರದು ನಮಗೂ ಯಾವುದೇ ತೊಂದರೆ ಆಗಬಾರದೆಂದರೆ ಬೀದಿ ನಾಯಿಗಳ ನಿರ್ವಹಣೆಯ ಸರಿಯಾದ ರೀತಿಯಲ್ಲಿ ಆಗಬೇಕು. ಒಂದು ಸ್ಥಳದಿಂದ ಇನೊಂದು ಸ್ಥಳಕ್ಕೆ ವರ್ಗಾಯಿಸುವುದು ಉತ್ತರವಲ್ಲ. ಅದು ಮರಳಿ ತನ್ನ ಊರಿಗೆ ಬರುವುದು ಸಹಜ. ಅದಕೋಸ್ಕರ ಬೀದಿ ನಾಯಿಗಳನ್ನು ನಿರ್ವಹಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಗಣನಿಯವಾದಂತಹ ಕಾರ್ಯ ಮಾಡಬೇಕು. ಅಂದರೆ ಅವುಗಳಿಗೆ ಹೊಂಡುವಂತಹ ವಾತಾವರಣದ ಪ್ರದೇಶವನ್ನು ಅದಕ್ಕೆ ವದಗಿಸಿ ಕೊಡುವುದು ಇದರಲ್ಲಿ ಮುಖ್ಯ ಪಾತ್ರ ವಹಿಸಿತ್ತದೆ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಒಮ್ಮೆ ವಿಚಾರ ಮಾಡಿ ನೋಡಿ. ನಿಮ್ಮ ಮನೆಯ ನಾಯಿ ಮರಿ ಹಾಕಿದಾಗ ಆ ಮರಿಗಳು ಅನ್ನತಿನ್ನುವಷ್ಟು ದೊಡ್ಡದಾದ ನಂತರ ಅದನ್ನು ನಾವು ಬೇರೆ ಯಾರದೋ ಮನೆಗೆ ಸಾಕಲು ಕೊಟ್ಟರೆ ಅಲ್ಲಿನ ವಾತಾವರಣ ಅದಕ್ಕೆ ಸರಿಹೊಂದದಿದ್ದರೆ ಎಷ್ಟೇ ದೂರವಾದರೂ ಅದು ಹುಟ್ಟು ಮನೆಗೆ ಹಿಂತಿರುಗಿ ಬರುವುದುಂಟು. ಹಾಗಿರುವಾಗ ಬೀದಿ ಬೀದಿ ಸುತ್ತುವ ನಾಯಿಗಳು ತಾವು ಮೊದಲಿದ್ದ ಸ್ಥಳಕ್ಕೆ ಬರುವುದು ಸಹಜ.

ರಾಜಕೀಯ ಎಂಬಂದು ಕೇವಲ ಮನುಷ್ಯರಲ್ಲಿ ಮಾತ್ರ ನಡಿಯಲ್ಲ. ಇದು ಪ್ರತಿಯೊಂದು ಪ್ರಾಣಿಗಳ ಸಂತತಿಯಲ್ಲೂ ನಡೆಯುತ್ತದೆ. ಹಾಗೇ ನಾಯಿಗಳಲ್ಲೂ ರಾಜಕೀಯ ನಡೆಯುತ್ತಿರಬಹುದು. ಅದ್ಕಕಾಗಿ ತನ್ನ ಪ್ರದೇಶದಲ್ಲಿ ತನ್ನ ಆಳ್ವಿಕೆ ನಡೆಸಲು ಅವು ಮರಳಿ ಬರುತ್ತವೆ ಎಂದು ನಾನು ನಂಬಿದ್ದೇನೆ. ಅದ್ಕಕಾಗಿ ಈ ಬೀದಿ ನಾಯಿ ಹಾವಳಿ ತಡಿಯ ಬೇಕೆಂದರೆ ಮೊದಲು ಅವುಗಳ ಮನಸ್ಥಿತಿಯನ್ನು ಅರಿಯಲು ಪ್ರಯತ್ನಿಸಬೇಕು ಮತ್ತು ಅವುಗಳಿಗೆ ಹೊಂದುವ ವಾತಾವರಣ ಇರುವೆಡೆ ಅವನ್ನು ಸ್ಥಳಾಂತರಿಸಬೇಕು. ಹೀಗೆ ಮಾಡಿದರೆ ಒಂದು ಮಟ್ಟದ ಬೀದಿ ನಾಯಿ ಹಾವಳಿ ತಡೆಗಟ್ಟಬಹುದು. ಈ ವ್ಯವಸ್ಥೆ ನಾಯಿಗಳಿಗೂ ಒಳ್ಳೆಯದು ಮನುಷ್ಯರಿಗೂ ಒಳ್ಳೆಯದು. ಪ್ರತಿಯೊಂದು ಪ್ರಾಣಿಗಳ ಮೇಲೆ ಕರುಣೆ ತೋರಬೇಕು. ಅದರಲ್ಲಿ ಬೀದಿ ನಾಯಿಗಳ ಮೇಲೆ ಕರುಣೆ ತೋರಿಸುವುದು ಮುಖ್ಯ. ಆದರೆ ಅವುಗಳ ಹಾವಳಿಯನ್ನು ಕಡೆಗಣಿಸುವಂತಿಲ್ಲ.ಅನೇಕರು ಬೀದಿ ನಾಯಿಗಳು ಪರಿಸರ ಸಮತೋಲನಕ್ಕೆ ಸಹಕಾರಿ ಎಂದು ನಂಬಿದ್ದಾರೆ.

✍ ವಾಣಿ ದಾಸ್

ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ವಾಣಿ ದಾಸ್, ಪ್ರಭು ವಡ್ಡರ್,ಶರಣಬಸು, ಕಾರ್ತಿಕ
ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ-3 ಸಂಚಿಕೆ-4